## ಬುತ್ತಿ ಚಿಗುರು

### ನಾಯಿ ಸರ್ವೇನಾ?

ಕಳೆದ ಅಕ್ಟೋಬರ್ ರಜೆಯಲ್ಲಿ ಸಾಮಾಜಿಕ, ಆರ್ಥಿಕ ಸಮೀಕ್ಷಾ ಕಾರ್ಯಕ್ಕೆ ನೇಮಕಗೊಂಡಿದ್ದೆ. ಮೊಬೈಲ್‌ನಲ್ಲಿ ಸಮೀಕ್ಷೆ ಕೈಗೊಳ್ಳುವುದು ಸುಲಭವಾದ ಕೆಲಸವಾಗಿತ್ತಾದರೂ ಮನೆಗಳು ಸಿಗದೇ ಒದ್ದಾಡುವಂತಾಗಿತ್ತು.

ದಾರಿಹೋಕರ, ನೆರೆಹೊರೆಯವರ ಸಹಾಯದಿಂದ ಮನೆಗಳ ಪತ್ತೆ ಹಚ್ಚುವ ಉಪಾಯ ಕಂಡುಕೊಂಡಿದ್ದೆ. ಹೀಗೆ ಮನೆಯೊಂದರ ವಿಳಾಸ ಕೇಳುವಾಗ ಅಲ್ಲೊಬ್ಬ 'ಆ ಮನೆಗೆ ಹೋಗುವಾಗ ಹುಷಾರು ಸಾರ್. ನಾಯಿ ಇದೆ, ಕಚ್ಚೋ ನಾಯಿ' ಅಂದುಬಿಟ್ಟ.

ಆ ಮನೆಗೆ ಹೋದ ತಕ್ಷಣ ಮುಂಜಾಗ್ರತೆಗಾಗಿ ಮನೆಯ ಯಜಮಾನಿಗೆ 'ನಿಮ್ಮ ಮನೆಯಲ್ಲಿ ನಾಯಿ ಇದೆಯಾ?' ಅಂದೆ.

'ತಾವು ಯಾರು? ಏಕೆ ಬಂದಿರುವಿರಿ?' ಎಂದಳು ಮನೆಯಾಕೆ. 'ಸರ್ವೆ ಮಾಡಲು' ಎಂದೆ.



ಆಗ ಅವಳು, 'ಏನು! ನಾಯಿಗಳ ಸರ್ವೆ ಮಾಡಲು ಬಂದಿದ್ದೀರಾ? ಬನ್ನಿ ಬನ್ನಿ...' ಎಂದಾಗ ದಿಗಿಲು ಬಡಿದಂತಾಯಿತು.

**ಗಿರೀಶ ಸೊಲ್ಲಾಪುರ**

---



### ನಾವು ನಿಮ್ಮದನ್ನು ಒಪ್ಪಿಲ್ವಾ?

ಗುಂಡ, ರೋಡ್ ಟ್ಯಾಕ್ಸ್ ಕಟ್ಟಲು, ಅದಕ್ಕೆ ಸಂಬಂಧಿಸಿದ ಆಫೀಸಿನಲ್ಲಿ ಕ್ಯೂನಲ್ಲಿ ನಿಂತು, ತನ್ನ ಸರದಿ ಬಂದಾಗ, ಕೌಂಟರಿನಲ್ಲಿ ಅಲ್ಲಲ್ಲಿ ತೂತು ಬಿದ್ದಿರುವ, ಸ್ವಲ್ಪಮಟ್ಟಿಗೆ ಹರಿದಿದ್ದ ಎರಡು ಐನೂರಿನ ನೋಟನ್ನು ಕೊಡುತ್ತಾನೆ.

ಅದನ್ನು ನೋಡಿ, ಹಣ ಪಡೆದ ಕ್ಯಾಷಿಯರ್, 'ಏನ್ಸಾರ್ ಹರಿದ, ತೂತಾಗಿರೋ ನೋಟ್ ಕೊಟ್ಟಿದ್ದೀರಾ?' ಎಂದಾಗ, ಗುಂಡ 'ಹೌದ್ರಿ, ಅಲ್ಲಲ್ಲಿ ಗುಂಡಿಗಳೇ ಇರುವ, ಕಿತ್ತು ಹೋಗಿರೋ ರಸ್ತೆಗೆ ಇಂತಹ ನೋಟುಗಳೇ ಸರಿ. ನಾವು ನಿಮ್ಮದನ್ನು ಒಪ್ಪಿಕೊಂಡಿಲ್ವಾ? ಹಾಗೆ, ನಮ್ಮದನ್ನು ಒಪ್ಪಿಕೊಂಡು, ಸುಮ್ಮನೆ ರಸೀತಿ ಕೊಡ್ರೀ' ಎಂದು ದಬಾಯಿಸಿದಾಗ, ಆ ಕ್ಯಾಷಿಯರ್ ಕಕ್ಕಾಬಿಕ್ಕಿಯಾದನು.

**ವಿ. ವಿಜಯೇಂದ್ರ ರಾವ್**